ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ.ಸಿ.ನಂ. 3266/2023

ಸಿ.ಡಬ್ಲ್ಯೂ -06
ಪಿ.ಡಬ್ಲ್ಯೂ -05

ಸಾಕ್ಷಿದಾರನ ಹೆಸರು :- ಡಾः ಅಕ್ಷಯ

ತಂದೆಯ ಹೆಸರು :- ಶಿವಕುಮಾರ್

ವಯಸ್ಸು :- 32 ವರ್ಷ

ಉದ್ಯೋಗ :- ವೈದ್ಯಾಧಿಕಾರಿಗಳು

ವಾಸ :- ಪ್ರಾ. ಆ. ಕೇಂದ್ರ ಹು.ದುರ್ಗ

**ಸಾಕ್ಷಿಗೆ ದಿಃ 01.06.2026 ರಂದು ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

2017 ರಿಂದ ಇಲ್ಲಿಯವರಗೆ ಹು.ದುರ್ಗ ಪ್ರಾ. ಆ. ಕೇಂದ್ರದಲ್ಲಿ ವೈದ್ಯನಾಗಿ ಸೇವೆ ಸಲ್ಲಿಸುತ್ತಿದ್ದೇನೆ.

ದಿಃ 20.06.2023 ಬೆಳಿಗ್ಗೆ 11 ಗಂಟೆ ಸಮಯದಲ್ಲಿ ಹಲ್ಲೇಯ ಹಿನ್ನೇಲೆಯಲ್ಲಿ ಚಾ.ಸಾ. 1 ಅವರು ಅದೇ ದಿನ 7.30 ಗಂಟೆಯ ಸಮಯದಲ್ಲಿ ಆರೋಪಿತರು ಅವರ ಜಮೀನಿನ ದೊಣ್ಣೆ ಮತ್ತು ಕೈಯಿಂದ ಹಲ್ಲೆ ಮಾಡಿರುವುದಾಗಿ ಹೇಳಿದ್ದು ಅವರನ್ನು ನಾನು ಪರಿಕ್ಷೆಗೆ ಒಳಪಡಿಸಿದಾಗ ಈ ಕೆಳಕಂಡ ಗಾಯಗಳು ಚಾ.ಸಾ. 1 ಅವರ ಮೈಮೇಲೆ ಕಂಡು ಬಂದಿರುತ್ತದೆ.

ಬಲ ಕೆನ್ನೆ ಮತ್ತು ಹಿಂದೆಲೆಯಲ್ಲಿ ನೋವು. ಸದರಿ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ. ಈ ಬಗ್ಗೆ ನಾನು ಗಾಯ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು ನಿ.ಪಿ 4 ಎಂದು, ಸಹಿಯನ್ನು ನಿಪಿ 4 (ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿಗಳ ಪರಃ ಜಿ.ಎನ್. ವಕೀಲರಿಂದಃ**

ಗಾಯದ ಪ್ರಮಾಣ ಪತ್ರದಲ್ಲಿ ಮಾಹಿತಿಯನ್ನು ಚಾಸಾ 1 ಅವರು ಹೇಳಿರುತ್ತಾರೆ. ಅವರ ಹೇಳಿಕೆ ಮೇರೆಗೆ ಅದನ್ನು ತಯಾರು ಮಾಡಲಾಗಿರುತ್ತದೆಂದು ಹೇಳುತ್ತಾರೆ. ನಾನು ಸಂಬಂದಪಟ್ಟ ಪೋಲಿಸ ಠಾಣೆಗೆ ದೂರವಾಣಿಯ ಮೂಲಕ ಮಾಹಿತಿ ನೀಡಿರುತ್ತೇನೆ. ಆ ಸಮಯದಲ್ಲಿ ಪೋಲಿಸರು ಆಸ್ಪತ್ರೆಗೆ ಬಂದಿರುವುದಿಲ್ಲ. ಪೋಲಿಸ ಠಾಣೆಗೆ ಮತ್ತು ಆಸ್ಪತ್ರೆಗೆ 1ವರೆ ಯಿಂದ 2 ಕೀ ಮೀ ಆಗುತ್ತದೆ. ಚಾಸಾ 1 ಅವರಿಗೆ ಪೋಲಿಸ ಠಾಣೆಯಲ್ಲಿ ದೂರನ್ನು

ದಾಖಲು ಮಾಡುವಂತೆ ನಾನು ಸೂಚಿಸಿರುವುದಿಲ್ಲ. ಗಾಯದ ಪ್ರಮಾಣ ಪತ್ರದಲ್ಲಿ ಗಾಯಗಳ ವಯಸ್ಸನ್ನು ನಮೂದು ಮಾಡಿರುವುದಿಲ್ಲ. ಗಾಯದ ಪ್ರಮಾಣ ಪತ್ರದಲ್ಲಿ ನಮೂದು ಮಾಡಿರುವ ಗಾಯಗಳು ಒಬ್ಬ ವ್ಯಕ್ತಿ ಆಯಾ ತಪ್ಪಿ ಹಿಂದೆ ಬಿದ್ದಾಗ ತಲೆಯ ಹಿಂಬಾಗ ಗಾಯ ಆಗುವ ಸಾದ್ಯತೆ ಇರುತ್ತದೆಂದು ಹೇಳುತ್ತಾರೆ. ನಾನು ಹೇಳುವ ರೀತಿ ಚಾಸಾ 1 ಅವರು ನಮ್ಮ ಆಸ್ಪತ್ರೆಗೆ ಬಂದಿಲ್ಲ ಯಾವುದೇ ಚಿಕಿತ್ಸೆ ಪಡೆದಿಲ್ಲವೆಂದರೆ ಸರಿಯಲ್ಲ. ನಾನು ಹೇಳುವ ರೀತಿ ಚಾಸಾ 1 ಅವರಿಗೆ ಯಾವುದೇ ಗಾಯಗಳು ಆಗಿರುವುದಿಲ್ಲವೆಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಅನುಕೂಲವಾಗಲೆಂದು ಪೋಲಿಸರ ಮಾತು ಕೇಳಿ ಸುಳ್ಳು ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.